ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ ,
ಚಿಕ್ಕಮಗಳೂರು.

ದಿನಾಂಕಃ **09-06-2026**

<u>ಸಿ.ಸಿ.ನಂ.**978/ 2021**</u>

<u>ಪಿರ್ಯಾದುದಾರರುಃ</u> ರಾಜ್ಯ ಸರ್ಕಾರದ ಪರವಾಗಿ ನಗರ ಠಾಣಾ
ಪೊಲೀಸರು, ಚಿಕ್ಕಮಗಳೂರು.

ವಿರುದ್ಧ

<u>ಆರೋಪಿ:</u> 5. ಕಣ್ಣ ಬಿನ್ ಸಗಾಯ ರಾಜ್,
ವಯಸ್ಸು ಸುಮಾರು 26 ವರ್ಷ,
ವಾಸಃ 2 ನೇ ತಿರುವು, ಜೆ.ಪಿ.ನಗರ,
ಶಿವಮೊಗ್ಗ ನಗರ, ಶಿವಮೊಗ್ಗ ಜಿಲ್ಲೆ.

<u>ದೋಷಾರೋಪಣೆ</u>

ಚಿಕ್ಕಮಗಳೂರಿನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯಾದ ಶ್ರೀಮತಿ ಕುಮಾರಿ ಸುಜಾತ , ಬಿ.ಕಾಂ ಎಲ್‌ಎಲ್.ಬಿ, ಆದ ನಾನು ಮೇಲೆ ನಮೂದು ಮಾಡಿರುವ ಆರೋಪಿತರಾದ ನಿಮ್ಮ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕಃ **04.11.2020** ರಂದು ಚಿಕ್ಕಮಗಳೂರು ನಗರ ಠಾಣಾ ವ್ಯಾಪ್ತಿಗೆ ಸೇರಿದ ಚಿಕ್ಕಮಗಳೂರು ನಗರದ ಕಲ್ಯಾಣ ನಗರದ **1** ನೇ ಕ್ರಾಸ್ ಕನಕ ಮಾರ್ಗದಲ್ಲಿರುವ ಚಾಸಾ-**1** ವಿಕ್ರಮ್ ಟಿ.ಸಿ. ರವರ ಮನೆಯಲ್ಲಿ ರಾತ್ರಿ ವೇಳೆಯಲ್ಲಿ ಈ ಪ್ರಕರಣದಿಂದ ಬೇರ್ಪಡಿಸಿದ ಆರೋಪಿತರು ಮನೆಯ ಮುಂಬಾಗಿಲನ್ನು ಮೀಟಿ ತೆಗೆದು ಒಳ ಪ್ರವೇಶಿಸಿ ಮನೆಯ ಎರಡು ಬೆಡ್ ರೂಂ ನ ವಾಲ್ ರೂಫ್ ನ್ನು ಸಹ ಮೀಟಿ ತೆಗೆದು ಅದಲ್ಲಿದ್ದ ಚಿನ್ನಾಭರಣಗಳನ್ನು ಕಳ್ಳತನ ಮಾಡಿದ್ದು, ಸದರಿ ಚಿನ್ನಾಭರಣಗಳನ್ನು ಕಳವು ಮಾಡಿದ್ದಾರೆ ಎಂದು ಗೊತ್ತಿದ್ದೂ ಸಹ **5** ನೇ ಆರೋಪಿಯಾದ ನೀವು ಅವುಗಳನ್ನು ಅಪ್ರಾಮಾಣಿಕತನದಿಂದ

ಖರೀದಿಸಿದ್ದು, ಆ ಕಾರಣ ಆರೋಪಿಯಾದ ನೀವು ಭಾ.ದಂ.ಸಂ.ಕಲಂ.411 ರ ಪ್ರಕಾರ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದೂ,

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 5 ನೇ ಆರೋಪಿಯಾದ ನೀವು ಸಾಕ್ಷ್ಯ ನಾಶ ಮಾಡುವ ಉದ್ದೇಶದಿಂದ ಸದರಿ ಚಿನ್ನಾಭರಣಗಳನ್ನು ಕರಗಿಸಿ ಗಟ್ಟಿಮಾಡಿದ್ದು, ಆ ಕಾರಣ ಆರೋಪಿಯಾದ ನೀವು ಭಾ.ದಂ.ಸಂ.ಕಲಂ.201 ರ ಪ್ರಕಾರ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಈ ದೋಷಾರೋಪಣೆ ಹೊರಿಸಲಾಗಿದೆ.

ಮೇಲಿನ ದೋಷಾರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶನ ನೀಡಲಾಗಿದೆ.

**Sd/-**

**(ಕುಮಾರಿ ಸುಜಾತ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.**